# ತೇಜಸ್ವಿ: ನೆನಪಿನಲ್ಲಿ ಮೂಡಿದ ಚಿತ್ರ

ಪ್ರೊ.ಬಿ.ಎನ್.ಶ್ರೀರಾಮ

ಒಂದು ದಿನ ತೇಜಸ್ವಿ ಏಕಾಏಕಿ ಬಂದರು. 'ಮೀನು ಹಿಡಿಯೋಣ ಬನ್ರೀ' ಎಂದು ನನ್ನನ್ನು ಕರೆದುಕೊಂಡು ಹೊರಟರು. ಮೂರು ಕುಚ್ಚು ಮೀನು ಸಿಕ್ಕವು. 'ರೀ ಪದ್ಮಾ, ಸಾರು ಮಾಡ್ರಿ' ಎಂದು ತೇಜಸ್ವಿ ಮೀನುಗಳನ್ನು ಕೊಟ್ಟರು. 'ಪದ್ಮ ಸ್ವಲ್ಪ ಸಾರು ಮಾಡು, ಸ್ವಲ್ಪ ಫ್ರೈ ಮಾಡು' ಎಂದ ನಾನು ಮೀನುಗಳನ್ನು ಕ್ಲೀನ್ ಮಾಡಿ ಕೊಟ್ಟೆ. ಸಾರು ಮುಗಿಯಿತು. ಮನೆ ತುಂಬ ಘಮ ಘಮ. ಇನ್ನೇನು ಫ್ರೈ ಮಾಡುವುದು ಮಾತ್ರ ಬಾಕಿ. ನಾನು, 'ತಟ್ಟೆ ಹಾಕು ಪದ್ಮಾ, ಬಾತ್ ರೂಂಗೆ ಹೋಗಿ ಬರ್ತೀನಿ' ಎಂದು ಹೋಗಿ ಬಂದೆ. ಎಲ್ಲ ಸಿದ್ಧವಾಯಿತು. ಊಟಕ್ಕೆ ಏಳಬೇಕು, ತೇಜಸ್ವಿ ನಾಪತ್ತೆ. ಅರೆ ಎಲ್ಲಿ ಹೋದರು! ಅತ್ಯಂತ ವ್ಯಾಮೋಹದಿಂದ ಮೀನು ಹಿಡಿದುಕೊಂಡು ಬಂದಿದ್ದವರು; ಇದ್ದಕ್ಕಿದ್ದಂತೆಯೇ ನಿರ್ಮೋಹಿಯಾಗಿ ನಾಪತ್ತೆಯಾಗಿದ್ದರು. ತೇಜಸ್ವಿಯವರ ವ್ಯಕ್ತಿತ್ವದಲ್ಲಿಯೇ ಇದ್ದ ಗುಣ ಅದು. ಮೊನ್ನೆ (ಏಪ್ರಿಲ್ 5; ತೇಜಸ್ವಿ ನಿಧನರಾದದ್ದು) ಅವರು ಮಾಯವಾದದ್ದೂ ಹೀಗೇ.

ಸಾಯುವುದಕ್ಕಿಂತ ಒಂದು ವಾರ ಮೊದಲು. ಇದ್ದಕ್ಕಿದ್ದ ಹಾಗೆಯೇ ಒಂದು ದಿನ ಫೋನ್ ಮಾಡಿ, 'ರೀ ಶ್ರೀರಾಂ, ಒಂದೆರಡು ವಿಮರ್ಶೆಯ ಲೇಖನಗಳನ್ನು ಬರೆಯಬೇಕು; ಎಫ್.ಆರ್.ಲೀವಿಸ್, ಎಲಿಯಟ್ ಪುಸ್ತಕಗಳನ್ನು ಹುಡುಕಿ ಕಳುಹಿಸ್ರೀ' ಎಂದರು. ಅವರಿಗೆ ಆಸಕ್ತಿ ಬಂದರೆ ಹಾಗೆಯೇ. ಕೂಡಲೇ ಕಳುಹಿಸಬೇಕು. ನಾನು ಪುಸ್ತಕಗಳಿಗಾಗಿ ಹುಡುಕಾಡಿದೆ. ನಮ್ಮ ಮಂಜುನಾಥ್‌ಗೆ ಹೇಳಿದೆ. ಐದನೆಯ ತಾರೀಖು ಪುಸ್ತಕಗಳನ್ನು ಕಳುಹಿಸಬೇಕೆಂದುಕೊಂಡಿದ್ದೆ. ಅವತ್ತೇ ಹೀಗಾಯಿತು. ಅವೆರಡು ಲೇಖನಗಳನ್ನು ಬರೆದಿದ್ರೆ...

ಚಂದ್ರಶೇಖರ ನಂಗಲಿ ಅವರು ತೇಜಸ್ವಿ ಅವರಿಗೆ ತಮ್ಮ ಪುಸ್ತಕಗಳನ್ನು ಕಳುಹಿಸಿ ಅಭಿಪ್ರಾಯ ಕೇಳಿದ್ರು. 'ಯಾರ್ರೀ ಈ ನಂಗಲಿ..' ಅಂತ ತೇಜಸ್ವಿ ನನ್ನ ಕೇಳಿದ್ರು. ನನಗೂ ಗೊತ್ತಿರಲಿಲ್ಲ. 'ಕೋಲಾರದ ಕಡೆಯವರಿರಬೇಕು' ಎಂದೆ. 'ಪರವಾಯಿಲ್ಲ. ಕೆಲವು ಪಾಯಿಂಟ್ಸ್ ಚೆನ್ನಾಗಿವೆ. ಸ್ಟಿಲ್ ಹಿ ಹ್ಯಾಸ್ ಟು ಇಂಪ್ರೂವ್....' ತಾವು ಹೇಳಬೇಕಾದ ಮಾತುಗಳಿಗಾಗಿ ತೇಜಸ್ವಿ ಒಂದು ಕಾಗದ ಬರೆದರು. ನನಗೆ ಇಡೀ ಕಾಗದವನ್ನು ಫೋನ್‌ನಲ್ಲಿ ಓದಿ ಹೇಳಿದ್ರು... ಅದೇ ಕೊನೆಯ ಕಾಗದ. 'ಉತ್ತರ ಬರಿಯೋಕೆ ಹೊರಟರೆ ಕಾದಂಬರಿ ಆಗುತ್ತಲ್ರೀ...' ಎಂದು ಹೇಳಿದ್ರೂ ಅವರು ಹೇಳಬೇಕಾದ ಮಾತುಗಳನ್ನು ಬಹಳ ಗಂಭೀರವಾಗಿಯೇ ಹೇಳಿದ್ರು. ಅದು ಅವರ ವಿಮರ್ಶಾ ಲೇಖನಗಳ ಪೂರ್ವ ತಯಾರಿಯಂತೆಯೂ ಕಾಣಿಸಿತು...

**(ಈ ಕಾಗದವನ್ನು ಪೂರ್ಣವಾಗಿ ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ– ಸಂ.)**

ಕತೆಗಾರ ಕೇಶವರೆಡ್ಡಿ ಹಂದ್ರಾಳ ತಮ್ಮ ಕತೆಗಳನ್ನು ಕಳುಹಿಸಿ ತೇಜಸ್ವಿಯವರಿಂದ ಮುನ್ನುಡಿಯನ್ನು ಕೇಳಿದ್ದರು. ತೇಜಸ್ವಿ ಕತೆಗಳನ್ನೆಲ್ಲ ಓದಿ ಅವರ ಅಭಿಪ್ರಾಯವನ್ನು ನನ್ನೊಂದಿಗೆ ಹೇಳಿಕೊಂಡರು: very rich and dence rural experience ಕಣ್ರೀ. ಆದರೆ ಈ ಅನುಭವವನ್ನು ಧ್ಯಾನಿಸಿ ಕಲಾತ್ಮಕಗೊಳಿಸುವಲ್ಲಿ ಸೋಲ್ತಾರೆ.' 'ಕಲಾತ್ಮಕತೆ ಎಂದರೆ ಏನು ಎಂಬುದನ್ನು ಹೇಳಿ. ಅವರಿಗೆ ತಿಳಿಯುತ್ತೆ. ಮುಂದೆ ಸರಿಮಾಡಿಕೊಳ್ತಾರೆ' ಎಂದು ನಾನು ಹೇಳಿದೆ. 'ಆಯ್ತು ತಗಳ್ರೀ' ಅಂದರು. ಕೆಲಸಗಳ ಮಧ್ಯೆ ಬೇಗ ಬರೆಯಲು ಅವರಿಗೆ ಸಾಧ್ಯವಾಗಲಿಲ್ಲ. ಅನೇಕ ದಿನಗಳ ನಂತರ ನೆನಪಿಸಿಕೊಂಡ್ರು. 'ಈಗ ಬರಿಯೋದೇನ್ರೀ' ಅಂತ ನನ್ನ ಕೇಳಿದ್ರು. ಆ ಹೊತ್ತಿಗೆ ಸಂಕಲನ ಬಂದು ಬಿಟ್ಟಿತ್ತು.

ಒಂದೇ ಒಂದು ಲೈನ್ ರೆಫರೆನ್ಸಿಗಾಗಿ ಅವರು (ಅದು ನಂಗಲಿ ಅವರಿಗೆ ಬರೆದ ಪತ್ರದಲ್ಲಿ ಪ್ರಕಟ

ವಾಗಿದೆ.) ಎಸ್ ಎಲ್. ಭೈರಪ್ಪನವರ 'ಆವರಣ'ವನ್ನು ತರಿಸಿಕೊಂಡರು. ಎರಡೇ ದಿನದಲ್ಲಿ ಪೂರ್ತಿ ಓದಿದರು. 'ಐದು ಆರನೆಯ ಮುದ್ರಣ ಎಂದೆಲ್ಲ ಹೇಳ್ತಾರಲ್ರೀ, ಇದು ಅನ್‌ರೀಡಬಲ್ ಸ್ಟಫ್. ಯಾರ್ರೀ ಇದನ್ನು ಓದುವವರು?...' ಎಂದು ಮಾತನಾಡಿದರು.



ಮೊದಮೊದಲು ತೇಜಸ್ವಿ ಅವರಿಗೆ ಶಿಕಾರಿ ದೊಡ್ಡ ವ್ಯಸನವಾಗಿತ್ತು. ಅದು ಅವರಿಗೆ ಮಲೆನಾಡಿನ ಮತ್ತು ಕುವೆಂಪು ಹೆರಿಟೇಜ್ ಮೂಲಕ ಬಂದದ್ದು. ನಿಧಾನಕ್ಕೆ ಪರಸರದ ಪ್ರಜ್ಞೆ ಮೂಡಿದಂತೆಲ್ಲ ತೇಜಸ್ವಿ ಶಿಕಾರಿಯಿಂದ ದೂರವಾದರು. ಒಂದು ಸಲ ಕಾಡಿಗೆ ಬೆಂಕಿ ಬಿದ್ದು ಒಂದು ಹಕ್ಕಿಯ ಕಣ್ಣು ಹೋಯಿತು. ಆ ಹಕ್ಕಿಯ ಫೋಟೋಗ್ರಾಫ್ ಮಾಡುವಾಗ ತೇಜಸ್ವಿ ಅವರಿಗೆ ಅದರ ಕಣ್ಣು ಹೋಗಿರುವುದು ತಿಳಿಯಿತು. ಕಾಡಿಗೆ ಬೆಂಕಿ ಬಿದ್ದರೆ ಏನಾಗುತ್ತೆ, ಪರಿಸರದ ಸಂಗತಿಗಳಲ್ಲಿ ಮನುಷ್ಯ ತಲೆಹಾಕಬಾರದು ಎಂಬುದು ತೇಜಸ್ವಿ ಅವರಿಗೆ ಸ್ಪಷ್ಟವಾಯಿತು. ಆಗಲೇ ಅವರ ಶಿಕಾರಿಯ ವ್ಯಸನ ಕಡಿಮೆಯಾಯಿತು. ಫೋಟೋಗ್ರಫಿ ಮತ್ತು ಮೀನು ಹಿಡಿಯುವುದರ ಕಡೆಗೆ ಅದು ಚದುರಿತು.

'ಹೊಗಳಿ ಬೆನ್ನುತಟ್ಟುವವರ ಸಾವಾಸಕ್ಕೆ ಹೋಗಬೇಡಿ' ಎಂದು ನನಗೆ ಮೊದಲಿನಿಂದಲೂ ತೇಜಸ್ವಿ ಹೇಳುತ್ತಿದ್ದರು. ಸ್ವತಃ ಅವರೇ ಅಂಥ ಮಾತುಗಳನ್ನು ಉದಾಸೀನದಿಂದ ನೋಡುತ್ತಿದ್ದರು. ಮೊದಲಿನಿಂದಲೂ ಅವರು ಹಾಗೆಯೇ ಇದ್ದರು. ಅವರ 'ಲಿಂಗಬಂದ' ಕತೆಗೆ ಪ್ರಜಾವಾಣಿ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಬಂತು. ಆಗ ಅಡಿಗರು ತೇಜಸ್ವಿಯವರಿಗೆ ಒಂದು ಕಾಗದ ಬರೆದಿದ್ದರು. ಬೇರೆಯವರಾಗಿದ್ದರೆ ಆ ಕಾಗದವನ್ನು ಹೊತ್ತು ತಿರುಗಾಡುತ್ತಿದ್ದರು. ಆ ಕಾಗದದಲ್ಲಿ ಅಡಿಗರು ಬರೆದಿದ್ದರು: 'ಕಾಫಿ ಹೌಸ್‌ನಲ್ಲಿ ನಿನ್ನನ್ನು ನೋಡಿದ್ದೇನೆ...You will be our greatest prose... ತೇಜಸ್ವಿ ಆ ಕಾಗದವನ್ನು ಅದೆಲ್ಲಿಯೋ ಹಾಕಿದ್ದರು.

ಇಂಥ ಮಾತುಗಳಿಗೆ ಅವರೆಂದೂ ಉಬ್ಬಿ ಹೋದವರಲ್ಲ. ಕಾರಂತರು ಒಂದು ಕಾಗದದಲ್ಲಿ ಬರೆದಿದ್ದರು– You are a great writer than me.

ಕಾರಂತರು ಈ ಮಾತುಗಳನ್ನು ಸುಮ್ಮನೇ ಹೇಳಿರಲಿಲ್ಲ. ಒಂದು ಸಲ ಕಾರಂತರಿಂದ ನನಗೆ ಅರವತ್ತು ರೂಪಾಯಿಗಳ ಒಂದು ಡಿಡಿ ಬಂತು. 'ಪರಿಸರದ ಕತೆ' ಕಳುಹಿಸಿ ಅಂತ ಬರೆದಿದ್ದರು. ನನಗೆ ಚಿಂತೆ ಆಯಿತು. ಕಾರಂತರಿಂದ ದುಡ್ಡು ತಗೊಂಡು ಪುಸ್ತಕ ಕಳುಹಿಸುವುದೇ? ತೇಜಸ್ವಿಗೆ ಕೇಳಿದೆ. 'ನಮ್ಮ ಪ್ರಕಾಶನದ ಎಲ್ಲ ಪುಸ್ತಕಗಳನ್ನೂ ಕಳುಹಿಸಿಬಿಡ್ರಿ' ಎಂದರು. ಹಾಗೆ ಮಾಡಲು ನನಗೆ ಮುಜುಗರ. 'ನಿಮ್ಮ ಕಗ್ಗಗಳನ್ನೆಲ್ಲ ನಾನು ಯಾಕೆ ಓದಬೇಕು?' ಎಂದು ಕಾರಂತರು ಸಿಟ್ಟಿಗೆದ್ದರೆ? ತೇಜಸ್ವಿ ಅವರಿಗೆ ಇದನ್ನು ಹೇಳಿದೆ. 'ಒಂದು ಕೆಲಸ ಮಾಡಿ, ನಾನು ಸೈನ್ ಹಾಕಿ ಇಟ್ಟಿರೋ ಪುಸ್ತಕಗಳನ್ನೆಲ್ಲ ತೆಗೆದುಕೊಂಡು ಅದರ ಮೇಲೆ ಹಿರಿಯರಿಗೆ ಗೌರವದಿಂದ ಎಂದು ಬರೆದು ಕಳುಹಿಸಿಬಿಡಿ.' ಹಾಗೆಯೇ ಮಾಡಿದೆ. ಮತ್ತೆ ಕಾರಂತರಿಂದ ಕಾಗದ

ಬಂತು: 'ಅಣ್ಣನ ನೆನಪು ಕಳುಹಿಸಿ.' ಅದನ್ನೂ ಕಳುಹಿಸಿದೆ. ಪರಿಸರದ ಕತೆ, ಏರೋಪ್ಲೇನ್ ಚಿಟ್ಟೆ, ಮಿಸ್ಸಿಂಗ್ ಲಿಂಕ್ ಎಲ್ಲವನ್ನೂ ಓದಿದ ಮೇಲೆಯೇ ಕಾರಂತರು, You are a great writer than me ಎಂದು ಬರೆದದ್ದು....

ನಿಮ್ಮ ಬರಹಗಳು ಜನರಿಗೆ ಯಾಕೆ ಬಹಳ ಇಷ್ಟವಾಗುತ್ತವೆ? ಎಂದೇನೋ ಕಾರಂತರು ಒಮ್ಮೆ ತೇಜಸ್ವಿಯವರಿಗೆ ಕಾಗದ ಬರೆದರು. ತೇಜಸ್ವಿ ಕಾರಂತರಿಗೆ ಉತ್ತರ ಬರೆದರು: 'ಓದುಗನಿಗೆ ತಿಳಿಯಬೇಕು ಎಂಬ ಅಂಶದ ಕಡೆಗೇ ನಿಮಗೆ ಗಮನವಿರುವುದಿಲ್ಲ. ನೇರವಾಗಿ ಇಂಗ್ಲಿಷ್‌ನಿಂದ ಭಾಷಾಂತರ ಮಾಡಿದಂತೆ ನಿಮ್ಮ ಬರಹಗಳು ಕಾಣಿಸುತ್ತವೆ. ನಿಮ್ಮ ಹಾಗೇ ಅನೇಕರು ಓದುಗರ ಬಗ್ಗೆ ತಾತ್ಸಾರದಿಂದ ಬರೆಯುತ್ತಾರೆ. ಅನುಭವವನ್ನೆಲ್ಲ ನಾನು ಕಥೆಗಳ ರೂಪದಲ್ಲಿ ಹೇಳುತ್ತೇನೆ. ಹಕ್ಕಿ, ಹಾವು, ಮರಿ ಹೀಗೆ ನಾನು ಕತೆಯನ್ನು ಹೇಳಿದಂತೆ ಬರೀತೀನಿ. ನನ್ನ ಬರವಣಿಗೆಯನ್ನು ಓದಿದಾಗ ಓದುಗರಿಗೆ ಅದು ಹತ್ತಿರವಾಗುತ್ತದೆ, ಆತ್ಮೀಯವಾಗಿ ಕಾಣಿಸುತ್ತದೆ.'

ಕಾರಂತರ ಒಡನಾಟ ಹೆಚ್ಚಿತು. ತೇಜಸ್ವಿ ಅವರ ಕೆಲಸಗಳಿಗೆ ಮಾರುಹೋದ ಕಾರಂತರು, 'ನನಗೂ ಒಂದು ಕಂಪ್ಯೂಟರ್ ಬೇಕು, ಕೊಡಿಸು' ಎಂದು ಕೇಳಿದರು. ತೇಜಸ್ವಿಯವರು, 'ರೀ ಶ್ರೀರಾಂ, ಕಾರಂತರಿಗೆ ನಮ್ಮ ಪ್ರಕಾಶನದಿಂದ ಒಂದು ಕಂಪ್ಯೂಟರ್ ಪ್ರೆಸೆಂಟ್ ಮಾಡೋಣ, ಉಡುಪಿಗೆ ಹೋಗಿ ಕೊಟ್ಟು ಬರೋಣ' ಎಂದರು. ಕೊಡಬೇಕು ಎಂದು ನಿರ್ಧರಿಸಿದೆವು. ಅಷ್ಟರಲ್ಲಿಯೇ ಕಾರಂತರು ಸೀರಿಯಸ್ ಅಂತ ಸುದ್ದಿ ಬಂತು. ಕೊನೆಗೂ ನಮಗೆ ಕಂಪ್ಯೂಟರ್ ಕೊಡಲು ಸಾಧ್ಯವಾಗಲೇ ಇಲ್ಲ. ಕಾರಂತರು ತೀರಿಹೋದರು ಮಹಿಳೆಯರನ್ನು ತೇಜಸ್ವಿ ಬಹಳ ಗೌರವದಿಂದ ಕಾಣುತ್ತಿದ್ದರು. ಕಿರಗೂರಿನ ಗಯ್ಯಾಳಿಗಳಲ್ಲಿ ಮಹಿಳೆಯರ ಬಗ್ಗೆ ಅವರ ಧೋರಣೆ ಏನಿದೆ ಅದನ್ನೇ ಅವರು ತಮ್ಮ ಜೀವನದುದ್ದಕ್ಕೂ ಪಾಲಿಸುತ್ತಿದ್ದರು. ಅದನ್ನೇ ಪಾಲಿಸುವಂತೆಯೂ ಇತರರಿಗೆ ಹೇಳುತ್ತಿದ್ದರು. ಅವರು ಕೆಲಸ ಮಾಡುತ್ತಿದ್ದ ರೀತಿಯೇ ವಿಚಿತ್ರವಾಗಿರುತ್ತಿತ್ತು. ಹೊತ್ತುಗೊತ್ತಿನ



**ಉದಯರವಿಯ ಮುಂದೆ ಕುವೆಂಪು ಅವರೊಂದಿಗೆ ತೇಜಸ್ವಿ**

**ಚಿತ್ರಕೃಪೆ: ಪದ್ಮಾ ಶ್ರೀರಾಮ್**

ಪ್ರಶ್ನೆಯೇ ಇರುತ್ತಿರಲಿಲ್ಲ. ರಾಜೇಶ್ವರಿಯವರು ಊಟವನ್ನು ತಂದು ಟೇಬಲ್‌ಗೆ ಇಟ್ಟು ಕರೆಯುತ್ತಿದ್ದರು. ಅದು ಕರೆ ಅಲ್ಲ; ಕೇವಲ ಅನೌನ್ಸ್‌ಮೆಂಟ್. ತೇಜಸ್ವಿ ತಮ್ಮ ಕೆಲಸದಲ್ಲಿ ಅದನ್ನೆಲ್ಲ ಗಮನಿಸುತ್ತಲೇ ಇರಲಿಲ್ಲ. ಯಾವಾಗಲೋ ಮನಸ್ಸು ಬಂದಾಗ ಎದ್ದು ಹೋಗಿ ಉಣ್ಣುತ್ತಿದ್ದೆವು. ಯಾರಾದರೂ ಬಡಿಸಬೇಕು ಎಂದು ಅವರು ಎಂದೂ ನಿರೀಕ್ಷಿಸುತ್ತಿರಲಿಲ್ಲ. ರಾತ್ರಿ 2-3 ಗಂಟೆಯವರೆಗೂ ಕೆಲಸ ಮಾಡುತ್ತಿದ್ದರು. ತಮಗೆ ಬೇಕೆನಿಸಿದಾಗ ಎದ್ದು ಹೋಗಿ ಕಾಫಿ, ಟೀ ಎಲ್ಲ ಅವರೇ ಮಾಡುತ್ತಿದ್ದರು. ಮಹಿಳೆಯರಿಗೆ ಕಡಿಮೆ ತೊಂದರೆ ಕೊಡಬೇಕು ಎಂಬುದು ಅವರ ವಿಚಾರ.

ಬೇರೆಯವರ ಬಗ್ಗೆ ಮಾತನಾಡುವಾಗಲೂ ಅವರೆಂದೂ ಏಕವಚನದಲ್ಲಿ ಮಾತನಾಡುತ್ತಿರಲಿಲ್ಲ. ಒಂದು ಸಲ ನಾನು ತೇಜಸ್ವಿ ಮೈಸೂರಿನಲ್ಲಿ ಕಾಫೀ ಹೌಸ್‌ಗೆ ಹೋಗುತ್ತಿದ್ದೆವು. ಒಬ್ಬ ಸಾಹಿತಿ ಆಗಲೇ ಬಂದು ಕಾಯುತ್ತಿರುವುದು ನನಗೆ ಕಾಣಿಸಿತು. '....ಆಗಲೇ ಬಂದ್‌ಬಿಟ್ಟಿದಾನಲ್ರೀ'. ಎಂದೆ. ತೇಜಸ್ವಿ ಸಿಟ್ಟು ಮಾಡಿಕೊಂಡರು. 'ಬಹುವಚನದಲ್ಲಿ ಮಾತನಾಡಲು ನಿಮಗೆ ಎಷ್ಟು ಕೊಡಬೇಕ್ರೀ' ಎಂದು ರೇಗಿದರು. ಅಂದಿನಿಂದಲೇ ನಾನು ಏಕವಚನದಲ್ಲಿ ಮಾತನಾಡುವುದನ್ನು ನಿಲ್ಲಿಸಿದೆ.

ತೇಜಸ್ವಿಯವರನ್ನು ನಾನು ಮೊದಲ ಸಲ ಭೇಟಿಯಾಗಿದ್ದು ನೆನಪಿಗೆ ಬರ್‍ತಿದೆ. ಅವತ್ತು ಕೃಷ್ಣ ಮೆನನ್ ಅವರನ್ನು ಬಾಯಿಗೆ ಬಂದಂತೆ ಬೈಯ್ದರು. ನಮಗೆ ನಿಜವಾದ ಬೆದರಿಕೆ ಇರುವುದು ಪಾಕಿಸ್ತಾನದಿಂದಲ್ಲ, ಚೀನಾದಿಂದ ಎಂದು ತೇಜಸ್ವಿ ವಾದಿಸುತ್ತಿದ್ದರು. ಮುಂದೆ ಅದು ನಿಜವೂ ಆಯಿತು... ಅವರಿಗೆ ಪ್ರಜಾಪ್ರಭುತ್ವದ ಬಗ್ಗೆ, ನೆಹರೂ ಬಗ್ಗೆ ಗೌರವ ಇತ್ತು. ನೆಹರೂ ಭಾರತದ ಜನಸಂಖ್ಯೆಯ ಬಗ್ಗೆ ಹೇಳಿದ್ದ ಮಾತುಗಳ ಬಗೆಗೂ ಗೌರವವಿತ್ತು. ಈ ಕಾರಣದಿಂದಾಗಿಯೇ ಗೆಳೆಯರಿಗೆಲ್ಲ, ತಡವಾಗಿ ಮದುವೆಯಾಗಿ ಎಂದು ಹೇಳುತ್ತಿದ್ದರು...

ತೇಜಸ್ವಿಯವರ ಬ್ಯಾಂಕ್ ಬ್ಯಾಲೆನ್ಸ್ ಎಷ್ಟು ಎಂಬುದು ನನಗೆ ಗೊತ್ತು. ಇತ್ತೀಚೆಗೆ ಅವರು, 'ಈ ವ್ಯವಸಾಯ ಸಾಕಾಗಿ ಬಿಟ್ಟಿದೆ ಮಾರಾಯ್ರೆ ಬ್ಯಾಂಕ್ ಬ್ಯಾಲೆನ್ಸ್ ಕೊನೆಗೆ ಬಂದು ಬಿಟ್ಟಿದೆ. ನನಗೆ ರಾಯಲ್ಟಿ ಕೊಡುವುದಿದ್ದರೆ ಕೊಟ್ಟುಬಿಡಿ.' ಆಗ ಅವರು ಮೈಸೂರಿನ ಗೋಪಾಲಗೌಡ ನರ್ಸಿಂಗ್ ಹೋಂನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರಿಗೆ ಹಣದ ಅಗತ್ಯವಿತ್ತು. ಕೂಡಲೇ ನಾನು ಹೋಗಿ ಒಂದಿಷ್ಟು ಹಣವನ್ನು ಕೊಟ್ಟುಬಂದೆ...

ಚಾಡಿ ಮಾತುಗಳ ಬಗ್ಗೆ ಒಂದಿಷ್ಟು ಹೇಳಬೇಕು, ತೇಜಸ್ವಿ ಎಂದೂ ಚಾಡಿ ಮಾತುಗಳನ್ನು ಕೇಳುತ್ತಿರಲಿಲ್ಲ. ಅವರಿಗೆ ಪಂಪ ಪ್ರಶಸ್ತಿ ಬಂದಾಗ ಅದನ್ನು ತೆಗೆದುಕೊಳ್ಳಲು ತೇಜಸ್ವಿ ಹೋಗಲಿಲ್ಲ. ಅದನ್ನು ಗಮನಿಸಿ ಮೈಸೂರಿನಲ್ಲೊಬ್ಬರು, 'ಪ್ರಚಾರಕ್ಕೆ ಮಾಡ್ತಿದಾರೇನೋ' ಅಂದ್ರು. ನನಗೊಬ್ಬರು ಈ ಮಾತನ್ನು ಫೋನ್ ಮಾಡಿ ತಿಳಿಸಿದರು. ನಾನು ಕೇಳಿಕೊಂಡು ಸುಮ್ಮನಾದೆ. ನನಗೆ ತಿಳಿಸಿದ ಅವರು ಅಲ್ಲಿಗೆ ಸುಮ್ಮನಾಗದೆ ತೇಜಸ್ವಿ ಅವರಿಗೂ ಫೋನ್ ಮಾಡಿ ಹೇಳಿದರು. ತೇಜಸ್ವಿ ನನಗೆ ಫೋನ್ ಮಾಡಿ 'ಹೌದೇನ್ರೀ?' ಅಂದ್ರು. 'ಅದೆಲ್ಲ ಮಾಮೂಲಿ ಬಿಡಿ' ಅಂದೆ ನಾನು. ಅವರು ಸುಮ್ಮನಾದರು. ಈ ಮಾತನ್ನು ಹೇಳಿದ ವ್ಯಕ್ತಿ ಅಲ್ಲಿಗೇ ಬಿಡಲಿಲ್ಲ. ತೇಜಸ್ವಿ ಮೈಸೂರಿಗೆ ಬಂದಾಗ ಮತ್ತೆ ಫೋನ್ ಮಾಡಿ ಹೇಳಿದರು. ತೇಜಸ್ವಿ ಈ ಚಾಡಿ ಹೇಳಿದವರ ಬಗ್ಗೆಯೇ ಅಸಮಾಧಾನ ವ್ಯಕ್ತಪಡಿಸಿದರು. 'ಏನ್ರೀ ಇದು ಅಸಹ್ಯ....' ಎಂದು ಚಾಡಿಕೋರರ ಬಗ್ಗೆ ಕೋಪ ವ್ಯಕ್ತಪಡಿಸಿದರು.

ಗಾಳ ಹಿಡಿದು ಅವರ ಜೊತೆಗೆ ಹೋದಾಗ ನಾವೂ ಮೌನವಾಗಿ ಕುಳಿತುಕೊಳ್ಳಬೇಕಾಗಿತ್ತು. ಅವರ ಮೌನ, ತದೇಕ ಚಿತ್ತತೆ ಎಷ್ಟೊಂದು ಜೋರಾಗಿರುತ್ತಿತ್ತು ಎಂದರೆ, ನಮ್ಮ ಹಿಂದೆ ಓತಿಕ್ಯಾತನೋ, ಔರಾಣಿಯೇ ಎಂದರೆ ಹಿಂದಿರುಗಿ ನೋಡುವುದಕ್ಕೂ ನಮಗೆ ದಿಗಿಲಾಗುತ್ತಿತ್ತು...

■

ನೆನಪು